# ಕೊರೋನಾ ಅಟ್ಟಹಾಸಕ್ಕೆ ಮಂಡ್ಯ ಜನತೆ ತತ್ತರ

## ಒಂದೇ ದಿನ ದಾಖಲೆ 71 ಪಾಸಿಟಿವ್ ಕೇಸ್ | ಕೆ.ಆರ್.ಪೇಟೆಯಲ್ಲೇ 50 ಸೋಂಕು | ಮುಂದುವರಿದ ಮುಂಬೈ ಲಿಂಕ್

● ಕನ್ನಡಪ್ರಭ ವಾರ್ತೆ ಮಂಡ್ಯ 20/5/20

ಮುಂಬೈ ನಂಟು ಮಂಡ್ಯದ ಪಾಲಿಗೆ ಮಂಗಲಾರದ ತುತ್ತಾಗಿ ಪರಿಣಮಿಸಿದ್ದು ಮಂಗಳವಾರ ಒಂದೇ ದಿನದಲ್ಲಿ 71 ಕೊರೋನಾ ಪಾಸಿಟಿವ್ ಪ್ರಕರಣಗಳು ವರದಿಯಾಗಿದೆ. ಅತಿ ಹೆಚ್ಚು ಪ್ರಕರಣಗಳು ದಾಖಲಾಗುತ್ತಿದ್ದ ಬೆಂಗಳೂರನ್ನು ಹಿಂದಿಕ್ಕುವ ಮಟ್ಟಕ್ಕೆ ಹೊಸ ಕೇಸ್‌ಗಳು ಪತ್ತೆಯಾಗುತ್ತಿರುವುದು ಆತಂಕ ಸೃಷ್ಟಿಸಿದೆ. ರಾಜ್ಯದ ಜಿಲ್ಲೆಯೊಂದರಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಸೋಂಕು ವರದಿಯಾಗಿರುವುದು ಇದೇ ಮೊದಲಾಗಿದ್ದು, ಮಂಗಳವಾರ ಪತ್ತೆಯಾಗಿರುವ ಅಷ್ಟೂ ಪ್ರಕರಣಗಳೂ ಮುಂಬೈ ನಂಟಿನಿಂದಲೇ ಹರಡಿದ್ದು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ತಿಳಿಸಿದ್ದಾರೆ.



ಒಂದೇ ದಿನ 71 ಪಾಸಿಟಿವ್ ಪ್ರಕರಣಗಳು ಸೇರಿ ಸೋಂಕಿತರ ಸಂಖ್ಯೆ ಈಗ ಒಂದೂವರೆ ಶತಕದ ಗಡಿ ದಾಟಿದೆ. ಸೋಂಕಿತರ ಸಂಖ್ಯೆ 160ರ ಗಡಿ ಮುಟ್ಟಿದ್ದರಿಂದ ಮಂಡ್ಯದವರಿಗೆ ಆತಂಕ ಹೆಚ್ಚಾಗಿದೆ. ಬೆಳಗ್ಗೆ ರಾಜ್ಯ ಸರ್ಕಾರ ಹೊರಡಿಸಿದ ಅಧಿಕೃತ ಮಾಹಿತಿಯಲ್ಲಿ ಮಂಡ್ಯದಲ್ಲಿ 62 ಮಂದಿಗೆ ಸೋಂಕಿತರು ಪತ್ತೆಯಾಗಿದ್ದಾರೆ ಎಂದು ಹೇಳಲಾಗಿತ್ತು. ಸಂಜೆ 5 ಗಂಟೆಗೆ ಮತ್ತೆ ಮಂಡ್ಯದಲ್ಲಿ 9 ಪ್ರಕರಣಗಳು ಪತ್ತೆಯಾಗಿವೆ. ಕೆ.ಆರ್.ಪೇಟೆ ತಾಲೂಕಲ್ಲೇ ಮಂಗಳವಾರ 50 ಕೇಸ್‌ಗಳು ಪತ್ತೆಯಾಗುವುದರೊಂದಿಗೆ ತಾಲೂಕಿನಲ್ಲಿ ಒಟ್ಟು ಸೋಂಕಿತರ ಸಂಖ್ಯೆ 104ಕ್ಕೆ ಏರಿಕೆ ಯಾಗಿದೆ. ಜೊತೆಗೆ ನಾಗಮಂಗಲದಲ್ಲಿ 21 ಕೇಸ್‌ಗಳು ಪತ್ತೆಯಾಗುವುದರೊಂದಿಗೆ ಒಟ್ಟು 26 ಪ್ರಕರಣಗಳು ವರದಿಯಾದಂತಾಗಿದೆ.

ಈ 71 ಪ್ರಕರಣಗಳಲ್ಲಿ 31 ಪುರುಷರು, 27 ಮಹಿಳೆಯರು, 13 ಮಕ್ಕಳಿದ್ದಾರೆ. ಮಕ್ಕಳಲ್ಲಿ 6 ಗಂಡು 7 ಹೆಣ್ಣು ಮಕ್ಕಳಿದ್ದು ಸೋಂಕಿತರೆಲ್ಲರನ್ನೂ ಮಂಡ್ಯ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಎಲ್ಲರೂ ಚಿಕಿತ್ಸೆಗೆ ಸ್ಪಂದಿಸುತ್ತಾರೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಕೋವಿಡ್ 19ಗೆ ನಿನ್ನೆ 3 ಸಾವು

**ಬೆಂಗಳೂರು:** ಕೋವಿಡ್ 19ಗೆ ರಾಜ್ಯದಲ್ಲಿ ಮಂಗಳವಾರ ಇಬ್ಬರು ವೃದ್ಧರೂ ಸೇರಿದಂತೆ ಒಟ್ಟು ಮೂರು ಮಂದಿ ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ. ಬಳ್ಳಾರಿಯ ಕೊರೋನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಗರದ ಕೋಟೆ ಪ್ರದೇಶದ 65 ವರ್ಷದ ವ್ಯಕ್ತಿ ಮಂಗಳವಾರ ಬೆಳಗಿನ ಜಾವ ಮೃತಪಟ್ಟಿದ್ದಾರೆ. ರಕ್ತದೊತ್ತಡ, ಸಕ್ಕರೆ ಕಾಯಿಲೆಯಿಂದ ಸಹ ಬಳಲುತ್ತಿದ್ದ ಅವರು ಚಿಕಿತ್ಸೆಗಾಗಿ ಬೆಂಗಳೂರಿನಲ್ಲಿಯೇ ಕೆಲವು ದಿನ ಉಳಿದಿದ್ದರಿಂದ ಅಲ್ಲಿಂದಲೇ ಸೋಂಕು ತಗುಲಿರಬಹುದು ಎಂದು ಶಂಕಿಸಲಾಗಿದೆ. ಇದೇವೇಳೆ ವಿಜಯಪುರ ನಗರದ ಕಂಟೈನ್ಮೆಂಟ್ ಝೋನ್‌ನಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದ 65 ವರ್ಷದ ವೃದ್ಧನಿಗೆ ಕೊರೋನಾ ಸೋಂಕು ತಗಲಿದ್ದು ದೃಢಪಟ್ಟಿದೆ.

ಬೆಂಗಳೂರಿನಲ್ಲಿ ಐಎಚ್‌ಡಿ ಸಮಸ್ಯೆಯಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ 54 ವರ್ಷದ ವ್ಯಕ್ತಿಯು (ಪಿ.1364) ಸೋಮವಾರ ಮೃತಪಟ್ಟಿದ್ದರು. ಅವರಿಗೆ ಕೊರೋನಾ ಸೋಂಕು ವರದಿಯಲ್ಲಿ ದೃಢಪಟ್ಟಿದೆ.

## ಕ್ವಾರಂಟೈನ್ ಆದವರಿಗೆ ಕೊರೋನಾ: ಭೀತಿ ಬೇಡ ಎಂದ ನಾರಾಯಣಗೌಡ



ಬೆಂಗಳೂರು: ರಾಜ್ಯದಲ್ಲಿ ಕೊರೋನಾ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚು ಸೋಂಕಿತರ ಸಂಖ್ಯೆ ಇದೆ. ಆದರೂ, ಜಿಲ್ಲೆಯ ಜನತೆ ಭಯಬೀಳುವ ಅಗತ್ಯ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ನಾರಾಯಣಗೌಡ ಅಭಯ ನೀಡಿದ್ದಾರೆ. ವಿಕಾಸಸೌಧದಲ್ಲಿ ಮಂಗಳವಾರ ಕೋವಿಡ್ ವಿಚಾರದಲ್ಲಿ ಜಿಲ್ಲೆಯ ಅಧಿಕಾರಿಗಳ ಜತೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಮಾಹಿತಿ ಪಡೆದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಕೊರೋನಾ ಸೋಂಕಿತರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಇದೆ. ಆದರೆ ಸೋಂಕಿತರೆಲ್ಲ ಹೊರ ರಾಜ್ಯಗಳಿಂದ ಬಂದು ಕ್ವಾರಂಟೈನ್ ಆಗಿದ್ದಾರೆ. ಅವರಿಂದ ಜಿಲ್ಲೆಯ ಜನರಿಗೆ ಹರಡಲು ಅವಕಾಶ ಇಲ್ಲ. ಹೊರ ರಾಜ್ಯಗಳಿಂದ ಮಂಡ್ಯ ಜಿಲ್ಲೆಗೆ ಬರಲು ಎರಡು ಸಾವಿರಕ್ಕೂ ಹೆಚ್ಚು ಜನರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅವರಲ್ಲಿ ಈಗಾಗಲೇ ಸುಮಾರು 1400 ಜನ ಜಿಲ್ಲೆಗೆ ಬಂದಿದ್ದಾರೆ. ಬಂದವರನ್ನೆಲ್ಲಾ ಕಡ್ಡಾಯವಾಗಿ ಕ್ವಾರಂಟೈನ್ ಮಾಡಲಾಗಿದೆ ಎಂದು ಹೇಳಿದರು.

## ಶಿವಮೊಗ್ಗದಲ್ಲಿ 10 ಮಂದಿಗೆ ಸೋಂಕು ದೃಢ

**ಶಿವಮೊಗ್ಗ:** ಶಿವಮೊಗ್ಗ ಜಿಲ್ಲೆಯಲ್ಲಿ ಮಂಗಳವಾರ 10 ಮಂದಿಗೆ ಕೊರೋನಾ ಸೋಂಕು ದೃಢಪಟ್ಟಿದೆ. ಇವರಲ್ಲಿ 8 ಮಂದಿ ಕ್ವಾರಂಟೈನ್‌ನಲ್ಲಿದ್ದವರು, ಒಬ್ಬರು ಸ್ವಯಂ ಪ್ರೇರಿತವಾಗಿ ಬಂದು ತಪಾಸಣೆ ಮಾಡಿಸಿಕೊಂಡವರು, ಮತ್ತೊಬ್ಬ ಮಹಿಳೆ ಸಾಂತ್ವನ ಕೇಂದ್ರದಲ್ಲಿದ್ದವರಾಗಿದ್ದಾರೆ. ಕ್ವಾರಂಟೈನ್‌ನಲ್ಲಿದ್ದ 8 ಮಂದಿಯಲ್ಲಿ ಐವರು ಮುಂಬೈಯಿಂದ, ಇಬ್ಬರು ಕೇರಳದಿಂದ ಹಾಗೂ ಒಬ್ಬರು ಆಂಧ್ರದಿಂದ ಬಂದವರಾಗಿದ್ದಾರೆ. ಉಳಿದ ಇಬ್ಬರಲ್ಲಿ ಒಬ್ಬರು ಶಿಕಾರಿಪುರ ಮತ್ತು ಇನ್ನೊಬ್ಬ ಶಿವಮೊಗ್ಗ ತಾಲೂಕಿನ ಗ್ರಾಮವೊಂದರಿಂದ ಬಂದವರಾಗಿದ್ದಾರೆ. 10 ಪಾಸಿಟಿವ್ ಸೋಂಕಿತರ ಪ್ರಾಥಮಿಕ ಸಂಪರ್ಕಕ್ಕೆ ಸಂಬಂಧಿಸಿದಂತೆ ಸದ್ಯ 18 ಮಂದಿಯ ಕುಟುಂಬದವರನ್ನು, ಸಂಪರ್ಕಿತರನ್ನು ಕ್ವಾರಂಟೈನ್ ಮಾಡಲಾಗಿದೆ.

## ಕ್ಯಾನ್ಸರ್ ಚಿಕಿತ್ಸೆಗೆ ಬಂದವಳಿಗೆ ಸೋಂಕು

**ಉಡುಪಿ:** ಜಿಲ್ಲೆಯಲ್ಲಿ ಮಂಗಳವಾರ ಮತ್ತೆ ಕೊರೋನಾ ಸೋಂಕು ಪ್ರಕರಣಗಳು ಪತ್ತೆಯಾಗಿದ್ದು, ತಲಾ ಇಬ್ಬರು ಪುರುಷರು ಹಾಗೂ ಮಹಿಳೆಯರು ಮತ್ತು ಒಬ್ಬ ಬಾಲಕ ಸೋಂಕಿತರಾಗಿದ್ದು, ಇದರೊಂದಿಗೆ ಜಿಲ್ಲೆಯಲ್ಲಿ ಕೊರೋನಾ ಸೋಂಕಿತರ ಸಂಖ್ಯೆ 16ಕ್ಕೇರಿದೆ. ಐವರು ಸೋಂಕಿತರಲ್ಲಿ 4 ಮಂದಿ ಮೂಲತಃ ಉಡುಪಿ ಜಿಲ್ಲೆಯವರು. ಒಬ್ಬ ಯುವತಿ ಚಿತ್ರದುರ್ಗ ಜಿಲ್ಲೆಯಿಂದ ಉಡುಪಿಗೆ ಕ್ಯಾನ್ಸರ್ ಚಿಕಿತ್ಸೆಗೆ ಬಂದ ರೋಗಿಯಾಗಿದ್ದಾರೆ. ಮುಂಬೈನಿಂದ ಬಂದ ನಾಲ್ವರು ಬೈಂದೂರು ತಾಲೂಕಿನವರಾಗಿದ್ದು, ಎಲ್ಲರೂ ಕ್ವಾರಂಟೈನ್‌ನಲ್ಲಿದ್ದರು.

## ಖಾಸಗಿ ಪಾಸಿಟಿವ್, ಸರ್ಕಾರದಲ್ಲಿ ನೆಗೆಟಿವ್!

**ಕಾರವಾರ:** ಸೋಂಕು ಇಲ್ಲದ ಇದ್ದರೂ ಪಾಸಿಟಿವ್ ಬಂದಿದ್ದು, ಖಾಸಗಿ ಪ್ರಯೋಗಾಲಯದ ಅವಾಂತರವೇ? ಎನ್ನುವ ಅನುಮಾನ ಉಂಟಾಗಿದೆ. ಗೋವಾದ ಖಾಸಗಿ ಲ್ಯಾಬ್‌ನಲ್ಲಿ ಉತ್ತರ ಕನ್ನಡದ ಯುವಕನಿಗೆ ಪಾಸಿಟಿವ್ ಬಂದು, ಬಳಿಕ 2 ದಿನದಲ್ಲಿ ಸರ್ಕಾರಿ ಪ್ರಯೋಗಾಲಯದಲ್ಲಿ ನೆಗೆಟಿವ್ ವರದಿ ಬಂದಿದೆ. ಮತ್ತೊಂದು ವರದಿ ಬರಬೇಕಿದೆ. ಆ ವರದಿ ಬಂದ ಬಳಿಕ ಸೋಂಕು ಇದೆಯೋ ಇಲ್ಲವೇ ಎನ್ನುವುದು ಸ್ಪಷ್ಟವಾಗಲಿದೆ. ಸೋಂಕಿತನೆಂದು ಯುವಕನ ಫೋಟೋ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಆತ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದ್ದಾನೆ.